# <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಜಗಳೂರು.</u>

## <u>ಸಿ. ಸಿ. ನಂ. 110/2023</u>

| **ಪಿರ್ಯಾದುದಾರರು** | ವಿರುದ್ಧ | **ಆರೋಪಿತರು** |
|---|---|---|
| ಜಗಳೂರು ಪೊಲೀಸ್ ಠಾಣೆ. | 1. | ಮುನಿಯಪ್ಪ ಕೆ. ಎನ್. ತಂದೆ ನಾರಪ್ಪ,<br>42 ವರ್ಷ, ವೃತ್ತಿ: ವ್ಯವಸಾಯ,<br>ಯರ್ಲಕಟ್ಟೆ ಗ್ರಾಮ, ಜಗಳೂರು ತಾ. |
| | 2. | ಶ್ರೀಮತಿ ವಿದ್ಯಾಶ್ರೀ ತಂದೆ ಮುನಿಯಪ್ಪ<br>ಕೆ. ಎನ್., 36 ವರ್ಷ, ವೃತ್ತಿ: ಗೃಹಿಣಿ,<br>ಯರ್ಲಕಟ್ಟೆ ಗ್ರಾಮ, ಜಗಳೂರು ತಾ. |
| | 3. | ಮಂಜುನಾಥ ತಂದೆ ಸಂಕ್ರಗೌಡ,<br>31 ವರ್ಷ, ವೃತ್ತಿ: ವ್ಯವಸಾಯ,<br>ಸಾಸ್ವೆಹಳ್ಳಿ ಗ್ರಾಮ, ಹರಪನಹಳ್ಳಿ ತಾ.<br>ಜಿ: ವಿಜಯನಗರ, |
| | 4. | ಕುಬೇರಗೌಡ ತಂದೆ ಗೋವಿಂದಪ್ಪ,<br>56 ವರ್ಷ, ವೃತ್ತಿ: ವ್ಯವಸಾಯ,<br>ಯರ್ಲಕಟ್ಟೆ ಗ್ರಾಮ, ಜಗಳೂರು ತಾ. |
| | 5. | ಶ್ರೀಮತಿ ನಾರಮ್ಮ ತಂದೆ ಕುಬೇರಗೌಡ,<br>47 ವರ್ಷ, ವೃತ್ತಿ: ಗೃಹಿಣಿ,<br>ಯರ್ಲಕಟ್ಟೆ ಗ್ರಾಮ, ಜಗಳೂರು ತಾ. |
| | 6. | ತಿಪ್ಪೇಸ್ವಾಮಿ ತಂದೆ ಕುಬೇರಗೌಡ,<br>28 ವರ್ಷ, ವೃತ್ತಿ: ವ್ಯವಸಾಯ,<br>ಯರ್ಲಕಟ್ಟೆ ಗ್ರಾಮ, ಜಗಳೂರು ತಾ.. |

**ದೋಷಾರೋಪಣೆ**

ಶ್ರೀ ಚೇತನ್ ಆರ್., ಬಿ.ಎ.ಎಲ್., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಜಗಳೂರು ಆದ ನಾನು ಈ ಮೂಲಕ ನಿಮ್ಮ ಮೇಲೆ ಹೊರಿಸಿದ ದೋಷಾರೋಪಣೆ ಏನೆಂದರೆ,

ದಿನಾಂಕ:14/11/2022 ರಂದು ಸಂಜೆ 5:30 ಗಂಟೆ ಸಮಯದಲ್ಲಿ ಜಗಳೂರು ಪೋಲೀಸ್ ಠಾಣಾ ಸರಹದ್ದಾದ ಯರ್ಲಕಟ್ಟೆ ಗ್ರಾಮದ ಚಾಸಾ.1 ರವರ ಮನೆ ಮುಂಭಾಗ ರಿಂದ 2 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮಾವಿನ ಸಸಿ ನೆಡುವ ವಿಚಾರಕ್ಕೆ ಸಂಬಂಧಿಸಿದಂತೆ ಅವರ ಜೊತೆ ಜಗಳ ತೆಗೆದು ಮಿಂಡ್ರಿಗಾಳಿ, ತುಡಿಗಿ, ಹಾದರಗಿತ್ತಿ ಅಂತಾ ನಿಂದಿಸಿರುತ್ತೀರಿ, ಅದೇ ದಿನ ರಾತ್ರಿ 8:00 ಗಂಟೆ ಸಮಯದಲ್ಲಿ ಮೇಲ್ಕಂಡ ವಿಚಾರಕ್ಕೆ ಸಂಬಂಧಿಸಿದಂತೆ 1 & 2 ನೇ ಆರೋಪಿತರ ಸಂಬಂಧಿಕರು ಪುನ: ಚಾಸಾ.1 ರವರ ಮನೆ ಮುಮದೆ ಜಗಳ ತೆಗೆದು 3 ರಿಂದ 6 ನೇ ಆರೋಪಿತರು ಸೂಳೆ, ಮಿಂಡ್ರಿ ಅಂತಾ ಎಲ್ಲರೂ ಅವಾಚ್ಯವಾಗಿ ನಿಂದಿಸಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಜೊತೆ 34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದೀರಿ ಎಂದು ಆಪಾದಿಸಲಾಗಿದೆ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ರವರ ಬೆನ್ನಿಗೆ ಕೈಗಳಿಂದ ಹೊಡೆದಿರುತ್ತೀರಿ, 2 ನೇ ಆರೋಪಿಯಾದ ನೀವು ಚಾಸಾ.1 ರವರ ತಲೆ ಕೂದಲು ಹಿಡಿದು

ಎಳೆದಾಡಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಜೊತೆ 34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದೀರಿ ಎಂದು ಆಪಾದಿಸಲಾಗಿದೆ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 3 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ರವರ ಕುತ್ತಿಗೆ ಹಾಗೂ ಎದೆಗೆ ಕಲ್ಲಿನಿಂದ ಹೊಡೆದಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಜೊತೆ 34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದೀರಿ ಎಂದು ಆಪಾದಿಸಲಾಗಿದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 2 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ, ಜೀವ ಬೆದರಿಕೆ ಹಾಕಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಜೊತೆ 34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದೀರಿ ಎಂದು ಆಪಾದಿಸಲಾಗಿದೆ.

ಮೇಲಿನ ಆರೋಪಕ್ಕೆ ನಿಮ್ಮನ್ನು ಗುರಿಪಡಿಸಿ ಈ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಬೇಕೆಂದು ನಿರ್ದೇಶಿಸಲಾಗಿದೆ.

**ಸಹಿ/-**

ದಿನಾಂಕ:19/04/2024.

**ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ**
**ನ್ಯಾಯಾಲಯ, ಜಗಳೂರು.**